ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

ಪುಟದ ಸಂಖ್ಯೆ 12

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮುಖ್ಯ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು

ಮಂಡಿಸಿದೆ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯದ ವಾರ್ಡ್ ನಂ:13 ರ ವ್ಯಾಪ್ತಿಯಲ್ಲಿ 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ-1806 ಮತ್ತು ಪಿ-3404 ರ ಅನುದಾನದಲ್ಲಿ ಪ್ರಸ್ತಾಪಿತ ಕಾಮಗಾರಿಗಳಿಗೆ ಜಾಬ್ ಕೋಡ್ ಪಡೆದಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

SL No	P-Code	Name of work	Job Code No	Est Cost (Rs. in Lakhs)	Randamisation Done or Not
1	P-1806	Development works at Dobhighat in Ward No.13 Mallasandra Ward.	013-19-000034	50.00	Yes
2	P-3404	Development works at Ranga Mandir (Balance Portion) in Ward No.13 Mallasandra Ward.	013-19-000035	25.00	Yes

ಈ ಮೇಲ್ಕಾಣಿಸಿದ ಕಾಮಗಾರಿಗಳನ್ನು ಪಾಲಿಕೆಯ ಸದಸ್ಯರಾದ ಶ್ರೀ.ಎನ್.ಲೋಕೇಶ್ ರವರು ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಪ್ರಸ್ತಾಪಿತ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತವಾದ ರೂ.75.00 ಲಕ್ಷಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆರವರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ:12/2018, ದಿನಾಂಕ:06/04/2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್-ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಠ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಪಾರದರ್ಶಕತೆ ಕಾಪ್ಪೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ರವರ ಕಛೇರಿ ಟಿಪ್ಪಣಿ ಸಂಖ್ಯೆ:1075/18-19, ದಿನಾಂಕ:11/07/2018 ರಂತೆ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗಧಿ ಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ॥ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಈ ಹಿನ್ನಲೆಯಲ್ಲಿ ವಾರ್ಡ್ ಸಂಖ್ಯೆ:13 ರಲ್ಲಿ ಮೇಲ್ಕಾಣಿಸಿದ ಕಾಮಗಾರಿಗಳನ್ನು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆರವರಿಗೆ ಛಪಿಸಿಕೊಡಲು ಸೂಕ್ತ ನಿರ್ಣಯ ಕೋರಿ ವಾರ್ಡ್ ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿ ಟಿಪ್ಪಣಿಯೊಂದಿಗೆ ಮಂಡಿಸಲು ಮಾನ್ಯ ಆಯುಕ್ತರು ರವರ ಸೂಕ್ತ ಆದೇಶ ಕೋರಿದೆ.

ಪು.ತಿ.ನೋ

Scanned by CamScanner

ಸಂಕ್ಷಿಪ್ತ ಸಂಖ್ಯೆ

ಟಿಪ್ಪಣಿಗಳು ಮತ್ತು ಆಜ್ಞೆಗಳು

ಪಿ.ಆ(ಯೋ)/ಪಿ.ಆರ್/8788/2018-19

ದಿನಾಂಕ:24-01-2019

ಕಾರ್ಯಪಾಲಕ ಅಭಿಯಂತರರು (ಯೋಜನೆ-ದಾಸರಹಳ್ಳಿ ವಿಭಾಗ) ಹಾಗೂ ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ವಾರ್ಡ್ ಸಂಖ್ಯೆ:13ರ ವ್ಯಾಪ್ತಿಯಲ್ಲಿ **ಕಂಡಿಕೆ-3ರಲ್ಲಿ ನಮೂದಿಸಿರುವ 02 ಕಾಮಗಾರಿಗಳನ್ನು ಕೈಗೊಳ್ಳಲು 2018-19 ನೇ ಸಾಲಿನ ಆಯವ್ಯಯದ ಲಿಕ್ಕಶೀರ್ಷಿಕೆ "ಪಿ-1808 ಮತ್ತು ಪಿ-3404" ಅನುದಾನದಡಿ ಸಂಖ್ಯೆ:013-19-0000034 & 013-19-0000035 ರ** ಕಾಮಗಾರಿ ಸಂಕೇತ ಪಡೆದುಕೊಂಡಿದ್ದು, **ಸದರಿ ಕಾಮಗಾರಿಗಳನ್ನು ಮೆ:ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು** ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿ ಮಂಡಿಸಲು ಪ್ರಸ್ತಾವನೆ ಮಂಡಿಸಿದ್ದು, ಪ್ರಧಾನ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 344 ವೆಚ್ಚ-12/2018, ದಿನಾಂಕ: 06-04-2018 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಕೆಲವೊಂದು ಷರತ್ತುಗೊಳಪಟ್ಟು ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಲಾಗಿರುತ್ತದೆ. ಈ ಪೈಕಿ ಷರತ್ತು ಸಂಖ್ಯೆ: (2) ರಲ್ಲಿ "**ಈ ಅಧಿಸೂಚನೆಯ ಅವಧಿಯು ಮುಕ್ತಾಯಗೊಳ್ಳುವುದರೊಳಗಾಗಿ, KHB ಮಾದರಿಯಲ್ಲಿಯೇ KRIDL ಸಂಸ್ಥೆಯು ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ವಯವೇ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು**" ಎಂದು ಸೂಚಿಸಿರುತ್ತಾರೆ.

ಮುಂದುವರೆದು, ಮಾನ್ಯ ಆಯುಕ್ತರ ದಿನಾಂಕ:11-07-2018 ರ ಆಂತರಿಕ ಕಛೇರಿ ಟಿಪ್ಪಣಿಯಲ್ಲಿ ಪಾಲಿಕೆಯ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗಧಿಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 344 ವೆಚ್ಚ-12/2018, ದಿನಾಂಕ: 06-04-2018 ರಲ್ಲಿನ ಷರತ್ತಿನಂತೆ ನಿಯಮಾನುಸಾರ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್ ಮುಖಾಂತರ ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ.

ಮುಂದುವರೆದು, **ಸರ್ಕಾರದ ಆದೇಶ ಸಂಖ್ಯೆ:ಸಕಇ/277/ಎಸ್.ಎಲ್.ಪಿ/2017, ದಿನಾಂಕ:24-08-2018 ರಂತೆ ಇಲಾಖೆ/ನಿಗಮ/ಸಂಸ್ಥೆಗಳು ರೂ.50.00 ಲಕ್ಷಗಳ ಮೌಲ್ಯಕ್ಕಿಂತ ಕಡಿಮೆ ಇರುವ ಕಾಮಗಾರಿಗಳ ಪೈಕಿ ಶೇ.24.10 ಸಂಖ್ಯೆಯ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಮತ್ತು ನಿರ್ಮಿತಿ ಕೇಂದ್ರಗಳಿಗೆ ವಹಿಸಬಾರದು ಮತ್ತು ಈ ಕಾಮಗಾರಿಗಳಿಗೆ ಮೀಸಲಾತಿ ಅನ್ವಯ ಟೆಂಡರ್ ಕರೆದು ಕಾಮಗಾರಿಗಳನ್ನು ವಹಿಸತಕ್ಕದ್ದು. ಮೀಸಲಾತಿಗೆ ಕಾಯ್ದಿರಿಸಿದ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳನ್ನು ಅವಶ್ಯಕತೆ ಇದ್ದಲ್ಲಿ, ಮೇಲ್ಕಂಡ ಸಂಸ್ಥೆಗಳಿಗೆ ಕಲಂ 4(ಜಿ) ಅನ್ವಯ ವಹಿಸಬಹುದು ಎಂದು ಆದೇಶಿಸಿದ್ದು, ಅದರಂತೆ, ಕಾರ್ಯಪಾಲಕ ಅಭಿಯಂತರರು (ಯೋಜನೆ-ದಾಸರಹಳ್ಳಿ ವಿಭಾಗ) ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ರೂ.50.00 ಲಕ್ಷಗಳ ಮೌಲ್ಯಕ್ಕಿಂತ ಕಡಿಮೆ ಇರುವ ಕಾಮಗಾರಿಗಳ ಪೈಕಿ ಶೇ.24.10 ಸಂಖ್ಯೆಯ ಕಾಮಗಾರಿಗಳನ್ನು ಮೀಸಲಾತಿಗೆ ಕಾಯ್ದಿರಿಸಿರುವ Randamization ಪಟ್ಟಿಯನ್ನು ಲಗತ್ತಿಸಿರುತ್ತಾರೆ.**

Scanned by CamScanner

ವಿಷಯ : Developmental works W.NO-13

ಪುಟದ ಸಂಖ್ಯೆ (14)

ಕಡತದ ಸಂಖ್ಯೆ SC(P)/6786/18-19

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ಆದೇಶ ಸಂಖ್ಯೆ:ಸಕಇ/277/ಎಸ್.ಎಲ್.ಪಿ/2017, ದಿನಾಂಕ:24-08-2018 ರಂತೆ Randamization ಮಾಡಿದಾಗ, ಇತರೆ ವರ್ಗಕ್ಕೆ ನಿಗಧಿಯಾಗಿರುವ ಕಂಡಿಕೆ-38ರಲ್ಲಿ ನಮೂದಿಸಿರುವ ಎರಡು ಕಾಮಗಾರಿಗಳನ್ನು ಮೆ:ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ನಿರ್ವಹಿಸಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿ ಮಂಡಿಸಲು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ಮತ್ತು ಪ್ರಧಾನ ಅಭಿಯಂತರರು ಶಿಫಾರಸ್ಸು ಮಾಡಿದ್ದು, ಪ್ರಸ್ತಾವನೆಯನ್ನು ಅನುಮೋದಿಸಬಹುದಾಗಿದೆ.

(55)

ವಿಶೇಷ ಆಯುಕ್ತರು (ಯೋಜನೆ)

(56) ಮಾನ್ಯ ಆಯುಕ್ತರು)

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಪ್ತ ಕಾರ್ಯಾಲಯ
ಪಿ.ಎಸ್.ಆರ್.(4) 6384
ದಿನಾಂಕ 28-01-19

(57) Spl. Commr (P) K
Special Commissioner (Project)
Bruhat Bangalore Mahanagara Palike

(58) EE

ಪ್ರಧಾನ ಅಭಿಯಂತರರ ಕಛೇರಿ
ಸಂಖ್ಯೆ 7292
ದಿನಾಂಕ 5/2/19

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

(59) ವಾ.ಕಾ.ಸ್ಥಾ.ಸ/5217/18-19

ವಾರ್ಡ್‌ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿಯ
ದಿನಾಂಕ 19/2/2019 ನಿರ್ಣಯವನ್ನು
ಪುಟ ಸಂಖ್ಯೆ 34 ರಲ್ಲಿ 35 ರಲ್ಲಿ ಮುಂದಿನ ಕ್ರಮಕ್ಕೆ ಸಲ್ಲಿಸಿದೆ.

ವಿಶೇಷ ಆಯುಕ್ತರು (ಯೋಜನೆ)

ಸಹಾಯಕ ಕಾರ್ಯದರ್ಶಿ ಕಛೇರಿ
ಪತ್ರ ಸಂಖ್ಯೆ 9575
ದಿನಾಂಕ 07-02-19
ಸಹಾಯಕ ಕಾರ್ಯದರ್ಶಿ 07/02/19

(60)

(61) 8639 01/03/19

(62)

ಮಾನ್ಯ ಆಯುಕ್ತರು ಗಮನಕ್ಕಾಗಿ
ಬಿ.ಬಿ.ಎಂ.ಪಿ. ಮುಖ್ಯ ಆಪ್ತ ಕಾರ್ಯಾಲಯ
ಸಂಖ್ಯೆ ಪಿ.ಎಸ್.ಆರ್.(C) 1187/18-19
ದಿನಾಂಕ 26/2/19

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Sp. Commr (P)
Special Commissioner (Project)
Bruhat Bangalore Mahanagara Palike

ಮುಖ್ಯ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು.

Scanned by CamScanner